(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

# ಸ್ವಾಮಿ ಬ್ರಹ್ಮಾನಂದರ ನೆನಪುಗಳು-9

ಸ್ವಾಮಿ ನಿರ್ವಾಣಾನಂದ

ತಮ್ಮ ರಕ್ಷಣೆಯಲ್ಲಿದ್ದವರನ್ನು ಮಹಾರಾಜ್ ಹೇಗೆ ಶಿಸ್ತಿನ ಜೀವನಕ್ಕೆ ಒಳಪಡಿಸುತ್ತಿದ್ದರೆಂಬುದನ್ನು ಮುಂದಿನ ಘಟನೆ ತಿಳಿಸುತ್ತದೆ.

ಮೂವರು ಯುವ ಬ್ರಹ್ಮಚಾರಿಗಳು (ಭಾರತದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ) ಕ್ರಾಂತಿಕಾರಿ ಚಳುವಳಿಗೆ ಸಂಬಂಧಿಸಿದವರಾಗಿದ್ದರು. ಮಠವನ್ನು ಸೇರಿದ ಮೇಲೂ ಪೋಲೀಸರು ಮಠಕ್ಕೆ ಬಂದು ಅವರುಗಳು ಮಠದಲ್ಲಿರುವರೇ ಎಂದು ಆಗಾಗ ನೋಡಿ ಹೋಗುತ್ತಿದ್ದರು.

ಒಂದು ಸಲ ಈ ಯುವಕರು ಯಾವುದೋ ಯಾತ್ರಾ ಸ್ಥಳಕ್ಕೆ ಹೋದವರು ಸಕಾಲದಲ್ಲಿ ಮಠಕ್ಕೆ ಹಿಂದಿರುಗಲಿಲ್ಲ. ಇದರಿಂದ ಮಹಾರಾಜ್‌ಗೆ ಆತಂಕವುಂಟಾಯಿತು. ಕೊನೆಗೆ ಅವರು ಹಿಂದಿರುಗಿದಾಗ ಮಹಾರಾಜ್ ಅವರನ್ನು ತರಾಟೆಗೆ ತೆಗೆದುಕೊಂಡು ಅವರನ್ನು ಮಠದಿಂದ ತೆಗೆದುಹಾಕಿದರು. ಬ್ರಹ್ಮಚಾರಿಗಳು ಬಿಟ್ಟುಹೋಗುತ್ತಿದ್ದಾಗ ಗೇಟಿನ ಬಳಿ ಸ್ವಾಮಿ ಪ್ರೇಮಾನಂದರನ್ನು ಸಂಧಿಸಿದರು. ಅವರಿಗೆ ತಮ್ಮ ಕಥೆಯನ್ನೆಲ್ಲಾ ಹೇಳಿಕೊಂಡರು. ಇವರುಗಳು ಮಠದ ಆವರಣದಿಂದ ಹೊರಗೆ ಹೋಗಬಾರದೆಂದೂ, ಒಂದು ಮರದ ಕೆಳಗೆ ಕುಳಿತುಕೊಂಡು ಪ್ರಾರ್ಥನೆ ಮಾಡುತ್ತಿರಬೇಕೆಂದೂ ಸ್ವಾಮಿ ಪ್ರೇಮಾನಂದರು ಬುದ್ಧಿ ಹೇಳಿದರು. ಅದರಂತೆ ಅವರು ನಡೆದುಕೊಂಡರು.

ಮಹಾರಾಜ್ ಅಂದು ಮಧ್ಯಾಹ್ನ ಊಟ ಮಾಡುವಾಗ, ಕೆಲವು ವಿಶೇಷ ತಿಂಡಿಗಳನ್ನು ಕೊಲ್ಕತಾದಿಂದ ತರಿಸುವಂತೆ ನನಗೆ ಹೇಳಿದರು. ಅವು ಎರಡು ಗಂಟೆಗಳೊಳಗೆ ಕೈಸೇರಿದವು. ತಮ್ಮ ಮಧ್ಯಾಹ್ನದ ವಿಶ್ರಾಂತಿಯ ನಂತರ ಮಹಾರಾಜ್ ಆ ಆಹಾರ ಪದಾರ್ಥಗಳು ತಲುಪಿವೆಯೇ ಎಂದು ವಿಚಾರಿಸಿದರು. ಅವುಗಳನ್ನು ಏತಕ್ಕಾಗಿ ತರಿಸಿರುವರೆಂದು ನನಗೇನೂ ಗೊತ್ತಿರಲಿಲ್ಲ. 'ಹೌದು ಮಹಾರಾಜ್, ಎಲ್ಲವೂ ಸಿದ್ಧವಾಗಿದೆ" ಎಂದು ಹೇಳಿದೆ. ಆಗ ಅವರು ಕೇಳಿದರು: "ಆ ಮೂವರು ಬ್ರಹ್ಮಚಾರಿಗಳು ಎಲ್ಲಿದ್ದಾರೆ? ನಿನಗೆ ಗೊತ್ತಿದೆಯೇ?" "ಇಲ್ಲ ಮಹಾರಾಜ್, ನಾನು ಅವರನ್ನು ನೋಡಿಲ್ಲ" ಎಂದು ಹೇಳಿದೆ.

"ಹೋಗಿ ಅವರನ್ನು ಪತ್ತೆ ಮಾಡು!" ಎಂದರು ಮಹಾರಾಜ್.

ನಾನು ತೋಟದೊಳಗೆ ಹೋದೆ. ಸ್ವಲ್ಪ ಸಮಯದಲ್ಲಿ ಆ ಮೂವರು ಒಂದು ಮರದ ಕೆಳಗೆ ಕುಳಿತಿದ್ದುದನ್ನು ಕಂಡು, ಮಹಾರಾಜರನ್ನು ಕಾಣಬೇಕೆಂದು ಅವರಿಗೆ ಹೇಳಿದೆ. ಅವರು ಸ್ವಾಮಿಗಳ ಕೊಠಡಿಗೆ ಹೋದಾಗ ಅದುವರೆಗೆ ನಡೆದುದನ್ನೆಲ್ಲಾ ಮರೆತುಬಿಡುವಂತೆ ಮಹಾರಾಜ್ ಅವರಿಗೆ ಪ್ರೀತಿಯಿಂದ ಹೇಳಿದರು. ನಂತರ, "ನಾವು ಸಾಧುಗಳು. ನಮ್ಮ ಕೋಪ ನೀರಿನ ಮೇಲೆ ಎಳೆದ ಗೆರೆಯಂತೆ... ಈಗ ಈ ತಿಂಡಿಗಳನ್ನು ತಿನ್ನಿ!" ಎಂದರು ನಗುತ್ತ.

ಒಬ್ಬ ಶಿಲ್ಪಿ ಕಡೆದಿದ್ದ ಶ್ರೀರಾಮಕೃಷ್ಣರ ಪ್ರತಿಮೆಯು ಶ್ರೀರಾಮಕೃಷ್ಣರನ್ನು ಸಮರ್ಪಕವಾಗಿ ಹೋಲುವುದೇ ಇಲ್ಲವೇ ಎಂದು ನೋಡಿ ಹೇಳುವಂತೆ, ಹಲವು ವರ್ಷಗಳ ನಂತರ ಮಹಾರಾಜರನ್ನು ಕೇಳಲಾಯಿತು. "ಅವರ ಯಾವ ರೂಪವನ್ನು ಶಿಲ್ಪಿ ಕೆತ್ತಿರುವನು?" ಎಂದು ಮಹಾರಾಜ್ ಕೇಳಿದರು. ಗುರುಮಹಾರಾಜರು ಅವರಿಗೆ ಅನೇಕ ದಿವ್ಯರೂಪಗಳಲ್ಲಿ ಕಾಣಿಸುತ್ತಿದ್ದರು ಎಂಬುದು ನಮಗೆ ಅರಿವಾದರೆ ಅವರ ಈ ಪ್ರಶ್ನೆಯ ಇಂಗಿತ ಸ್ಪಷ್ಟವಾಗುವುದು.

ಗುರುಮಹಾರಾಜರ ಅವತಾರದ ಮಹತ್ವದ ಬಗ್ಗೆ ಮಹಾರಾಜ್ ಹೆಚ್ಚು ಒತ್ತಿ ಹೇಳುತ್ತಿದ್ದರು. ಅಂತಹ ಅವತಾರ ಪುರುಷರು ಹುಟ್ಟಿ ಬಂದಾಗ ಹೆಚ್ಚು ಆಧ್ಯಾತ್ಮಿಕ ಶಕ್ತಿ ವ್ಯಕ್ತವಾಗುವುದು ಮತ್ತು ಸ್ವಲ್ಪ ಪ್ರಯತ್ನದಿಂದಲೇ ಆಧ್ಯಾತ್ಮಿಕ ಸಾಧಕರು ಪ್ರಗತಿ ಹೊಂದಬಲ್ಲರು ಎನ್ನುತ್ತಿದ್ದರು. ಒಂದು ದಿನ ಮಹಾರಾಜ್ 'ವಚನವೇದ'ದ ಕರ್ತೃಗಳಾದ 'ಮ' ಅವರಿಗೆ ಹೇಳಿದರು: "ಗುರುಮಹಾರಾಜರು ಈ ಬಾರಿ ಬಂದುದು ಜೀವನಿಗೂ ಮತ್ತು ಶಿವನಿಗೂ (ಮನುಷ್ಯ ಮತ್ತು ಭಗವಂತನಿಗೆ) ಒಂದು ಸೇತುವೆಯನ್ನು ನಿರ್ಮಿಸಲು. ನೋಡಿ, ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಈಗ ಎಷ್ಟು ಸುಲಭವಾಗಿದೆ!"


ಮಹಾರಾಜ್ ನಮಗೆ ಹೇಳುತ್ತಿದ್ದರು: "ಈ ಅವಕಾಶವನ್ನು ವ್ಯರ್ಥ ಮಾಡಬೇಡಿ! ಬಿಡದೆ ಪ್ರಯತ್ನಿಸಿ! ಈ ಅವಕಾಶವನ್ನು ಕಳೆದುಕೊಂಡರೆ ನಂತರ ವಿಷಾದಿಸುವಿರಿ. ಶ್ರೀರಾಮಕೃಷ್ಣರು ಸತ್ಯಸ್ವರೂಪರು. ಅವರ ಆದರ್ಶದಂತೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿ. ನಿಮ್ಮಲ್ಲಿ, ಯಾರು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವಿರೊ ಅವರಿಗೂ ಕೂಡ, ಶುದ್ಧ, ನಿಸ್ವಾರ್ಥ ಕರ್ಮವನ್ನು ಅಭ್ಯಾಸ ಮಾಡುವುದರ ಮೂಲಕ ಸತ್ಯವನ್ನು ಸಾಕ್ಷಾತ್ಕಾರಗೊಳಿಸಿಕೊಂಡು ಗುರಿಯನ್ನು ಸೇರಲು ಸಾಧ್ಯವಾಗುವುದು."

ಶ್ರೀರಾಮಕೃಷ್ಣರು ಹೇಳುತ್ತಿದ್ದರು: 'ರಾಖಾಲ ನನ್ನ ಮಗ; ನನ್ನ ಆಧ್ಯಾತ್ಮಿಕ ಪುತ್ರ." ಈ ದಿವ್ಯವೂ ಅಲೌಕಿಕವೂ ಆದ

ಸಂಬಂಧದ ವಾಸ್ತವಿಕತೆ ಮಹಾರಾಜ್‌ರ ಕಾಲಾನಂತರವೂ ಇತ್ತು ಎಂಬುದನ್ನು ಮುಂಬರುವ ಘಟನೆಯಿಂದ ಅರ್ಥ ಮಾಡಿಕೊಳ್ಳಬಹುದು. ಇದು ನಡೆದದ್ದು ೧೯೧೮ರಲ್ಲಿ. ಮಹಾರಾಜ್ ಆಗ ಕೊಲ್ಕತಾದ ಬಾಗ್‌ಬಜ಼ಾರ್ ಮೊಹಲ್ಲದ ಬಲರಾಮ್ ಬೋಸ್ ಅವರ ಮನೆಯಲ್ಲಿ ವಾಸವಿದ್ದರು. ನಾನು ಅವರ ಸೇವಕನಾಗಿದ್ದುದರಿಂದ, ನಾನೂ ಆ ಸಮಯದಲ್ಲಿ ಅವರೊಡನಿದ್ದೆ. ಒಂದು ದಿನ ಮಹಾರಾಜ್ ಆಗಷ್ಟೇ ಮಧ್ಯಾಹ್ನದ ಊಟವನ್ನು ಮುಗಿಸಿದ್ದರು. ಸಾಮಾನ್ಯವಾಗಿ ಇದು ಅವರು ವಿಶ್ರಾಂತಿ ತೆಗೆದುಕೊಳ್ಳುವ ಸಮಯ. ಅವರ ಕೊಠಡಿಯ ಹೊರಗಡೆ ಒಂದು ಬೆಂಚಿನ ಮೇಲೆ ನಾನು ಕುಳಿತಿದ್ದೆ. ಆಗ ಯುವತಿಯೊಬ್ಬಳು ತನ್ನ ಸಹೋದರನೊಡನೆ ಬಂದಳು. ಆ ಯುವತಿ ಮಹಾರಾಜ್ ಅವರನ್ನು ನೋಡಲು ಅನುಮತಿ ಕೇಳಿದಳು. ಅವರನ್ನು ಕಾಣಲು ಈಗ ಸಮಯವಲ್ಲವೆಂದು ನಾನು ಆಕೆಗೆ ಹೇಳಿದೆ. ಅವಳು ಅಳಲು ಪ್ರಾರಂಭಿಸಿದಳು. ಸ್ವಾಮಿ ಶಾರದಾನಂದರು ಆಕೆಗೆ ಮಹಾರಾಜ್‌ರನ್ನು ಕಾಣಲು ಹೇಳಿದ್ದರು. ಗೋಗರೆಯುತ್ತ ಆಕೆ ಕೇಳಿದಳು: "ನೋಡಿ, ನಾನು ಅವರ ಪಾದಗಳಿಗೆ ಕೇವಲ ಪ್ರಣಾಮ ಮಾಡಿ ಹೊರಟುಹೋಗುತ್ತೇನೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಿ!"

ಆಕೆಯ ಕಾತರತೆಯಿಂದ ಮನಕರಗಿದವನಾಗಿ ನಾನು ಮತ್ತೆ ಮಹಾರಾಜ್ ಬಳಿಗೆ ಹೋಗಿ ಹೇಳಿದೆ, "ಶರತ್ ಮಹಾರಾಜರು ಈ ಹುಡುಗಿಯನ್ನು ಕಳುಹಿಸಿರುವರು. ಆಕೆ ನಿಮಗೆ ಕೇವಲ ನಮಸ್ಕರಿಸಿ ಹೊರಟುಹೋಗುವಳಂತೆ." ಸ್ವಾಮಿ ಶಾರದಾನಂದರ ಹೆಸರನ್ನು ಹೇಳಿದಾಗ ಮಹಾರಾಜ್ ಆಕೆಯನ್ನು ನೋಡಲು ಒಪ್ಪಿದರು.

ನಮಸ್ಕರಿಸುವಾಗ ಆ ಹುಡುಗಿ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿ ಭಾವೋದ್ವಿಗ್ನಳಾದಳೆಂದು ನಂತರ ನನಗೆ ತಿಳಿಯಿತು. ಮಹಾರಾಜ್ ತಕ್ಷಣವೇ ಭಾವಾವಸ್ಥೆಗೆ ಹೋಗಿ ಮೌನರಾಗಿ, ನಿಶ್ಚಲರಾದರು. ಸ್ವಲ್ಪ ಹೊತ್ತಾದ ಮೇಲೆ ಅವರು ಹುಡುಗಿಯ ಕಡೆ ನೋಡಿ ಹೇಳಿದರು: "ಏಳು, ಮಗು. ಏನಾಯಿತು ಎನ್ನುವುದನ್ನು ಹೇಳು." ಆದರೆ ಆ ಹುಡುಗಿ ಇನ್ನೂ ಅಳುತ್ತಿದ್ದಳು. ಆಕೆ ಎದ್ದು ನಿಂತಳು, ಆದರೆ ಕೆಲಹೊತ್ತು ಆಕೆಗೆ ಮಾತನಾಡಲಾಗಲಿಲ್ಲ. ನಂತರ, ಮಹಾರಾಜರ ಕೋಣೆಯಲ್ಲಿದ್ದ ಶ್ರೀರಾಮಕೃಷ್ಣರ ಭಾವಚಿತ್ರವೊಂದರ ಕಡೆಗೆ ಕೈ ತೋರಿಸುತ್ತಾ, "ಅವರು ನಿಮ್ಮಲ್ಲಿಗೆ ಹೋಗಲು ನನಗೆ ಹೇಳಿದರು" ಎಂದು ಹೇಳಿದಳು. ಅವಳು ತನ್ನ ಕಥೆಯನ್ನು ಹೇಳಿದಳು. ಆಕೆಗೆ ಹದಿನಾಲ್ಕನೆಯ ವಯಸ್ಸಿನಲ್ಲಿ ವಿವಾಹವಾಯಿತು. ಮದುವೆಯಾದ ಕೇವಲ ಎರಡು ವಾರಗಳಲ್ಲಿ ಆಕೆಯ ಗಂಡ ತೀರಿಹೋದ. (ಭಾರತದಲ್ಲಿ ಇದೊಂದು



ಧ್ಯಾನಸ್ಥರಾಗಿರುವ ಸ್ವಾಮಿ ಬ್ರಹ್ಮಾನಂದರು

ದುಃಸ್ಥಿತಿ, ಏಕೆಂದರೆ ಆಗಿನ ಕಾಲದಲ್ಲಿ ಹಿಂದೂ ವಿಧವೆಯು ಪುನರ್ವಿವಾಹವಾಗುವಂತಿರಲಿಲ್ಲ, ಇಲ್ಲವೇ ತನ್ನ ಜೀವನೋಪಾಯಕ್ಕಾಗಿ ಕೆಲಸ ಮಾಡುವಂತಿಲ್ಲ ಮತ್ತು ತನ್ನ ರಕ್ಷಣೆಗಾಗಿ ಬಹುತೇಕ ತನ್ನ ತಾಯಿತಂದೆಗಳ ಅಥವಾ ಹತ್ತಿರದ ನೆಂಟರ ಆಶ್ರಯವನ್ನು ಅವಲಂಬಿಸಬೇಕಾಗುತ್ತಿತ್ತು.)

ಅವಳ ಭವಿಷ್ಯ ಅತ್ಯಂತ ಕರಾಳವಾಗಿ ಕಂಡಿತು. ದಿಕ್ಕು ಕಾಣದೆ ಬಹಳ ದುಃಖಿತಳಾಗಿ, ಭಗವಂತನಿಗೆ ನಿರಂತರವಾಗಿ ಪ್ರಾರ್ಥಿಸಿದಳು: "ಓ ಭಗವಂತ, ನನ್ನ ಗತಿ ಏನು? ದಯವಿಟ್ಟು ದಾರಿ ತೋರು!" ಸುಮಾರು ಒಂದು ವರ್ಷದ ನಂತರ ಶ್ರೀರಾಮಕೃಷ್ಣರು ಅವಳ ಕನಸಿನಲ್ಲಿ ಕಾಣಿಸಿಕೊಂಡು ಹೇಳಿದರು: "ಅಳಬೇಡ. ನನ್ನ ಮಗ ರಾಖಾಲ್ ಬಾಗ್‌ಬಜ಼ಾರಿನಲ್ಲಿ ಇದ್ದಾನೆ. ಅವನ ಬಳಿ ಹೋಗು. ಅವನು ಸಹಾಯ ಮಾಡುವನು." ಆಕೆಗೆ ಶ್ರೀರಾಮಕೃಷ್ಣರ ವಿಷಯವಾಗಲಿ ಅಥವಾ ರಾಖಾಲ್ ಮಹಾರಾಜ್ ವಿಷಯವಾಗಲಿ ಏನೂ ಗೊತ್ತಿರಲಿಲ್ಲ. ತನ್ನ ವಾಸಸ್ಥಳದಿಂದ ದೂರವಿರುವ ಕೊಲ್ಕತಾದ ಮತ್ತೊಂದು ತುದಿಯಲ್ಲಿರುವ ಬಾಗ್‌ಬಜ಼ಾರನ್ನು ತಲಪುವುದು ಹೇಗೆಂದು ಅವಳು ಚಿಂತಿಸತೊಡಗಿದಳು. ಅವಳು ತನ್ನ ಕನಸಿನ ಬಗ್ಗೆ ತನ್ನ ಮಾವನ ಮನೆಯವರಿಗೂ ತಿಳಿಸಲಿಲ್ಲ. ಆದರೆ ತನ್ನ ತಾಯಿಯ ಬಳಿಗೆ ಹೋಗಿ ಅವಳಿಗೆ ಎಲ್ಲವನ್ನೂ ಹೇಳಿಕೊಂಡಳು. ಅವಳ ತಾಯಿಗೆ ಶ್ರೀರಾಮಕೃಷ್ಣರ ಬಗ್ಗೆ

ಗೊತ್ತಿತ್ತು. ತಾಯಿಯಿಂದ ಅವರ ಬಗ್ಗೆ ತಿಳಿದು ತನ್ನ ಸಹೋದರನೊಂದಿಗೆ ಬಾಗ್‌ಬಜಾರಿಗೆ ಬಂದಳು. ಅಲ್ಲಿ ಯಾರಾದರೂ ಸಾಧುಗಳು ವಾಸಿಸುತ್ತಿರುವರೇ ಎಂದು ವಿಚಾರಿಸಿದಳು. ರಾಮಕೃಷ್ಣ ಸಂಘದ ಉದ್ಬೋಧನ ಪ್ರಕಾಶನದ ಮನೆಯಲ್ಲಿ ಅನೇಕ ಸಾಧುಗಳು ವಾಸಿಸುತ್ತಿರುವರೆಂದು ಅವಳಿಗೆ ಜನ ಹೇಳಿದರು. ಆ ಸಮಯದಲ್ಲಿ ಸ್ವಾಮಿ ಶಾರದಾ ನಂದರು ಅಲ್ಲಿ ವಾಸವಾಗಿದ್ದರು. ತಾನು ಕಂಡ ಶ್ರೀರಾಮಕೃಷ್ಣರ ದರ್ಶನದ ಬಗ್ಗೆ ಅವರಿಗೆ ಹೇಳಿದಳು. ಸ್ವಾಮಿಗಳು ಅವಳಿಗೆ ಬಲರಾಮ ಮಂದಿರಕ್ಕೆ ಹೋಗಿ ಮಹಾರಾಜ್‌ರನ್ನು ನೋಡಲು ಹೇಳಿಕಳುಹಿಸಿದರು.

ಆ ಹುಡುಗಿ ಮಹಾರಾಜ್‌ರೊಡನೆ ಎರಡು ಗಂಟೆಗಳಿಗೂ ಹೆಚ್ಚು ಕಾಲ ಮಾತನಾಡುತ್ತಿದ್ದಳು. ಕೊನೆಗೆ ಮಹಾರಾಜ್ ನನ್ನನ್ನು ಕರೆದರು. ನಾನು ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆ ಆ ಹುಡುಗಿ ದೀಕ್ಷೆ ಪಡೆದಿರುವುದನ್ನು ಗಮನಿಸಿದೆ. ಆಕೆಗೂ ಮತ್ತು ಅವಳ ಸಹೋದರನಿಗೂ ಊಟವನ್ನು ತರುವಂತೆ ಮಹಾರಾಜ್ ನನಗೆ ಹೇಳಿದರು. ಈ ಭೇಟಿಯ ನಂತರ ಆ ಹುಡುಗಿ ಮಹಾರಾಜರನ್ನು ನೋಡಲು ಆಗಾಗ್ಗೆ ಬರುತ್ತಿದ್ದಳು. ಮಹಾರಾಜ್ ೧೯೨೨ರಲ್ಲಿ ಕಾಲವಾದ ನಂತರವೂ ಆ ಮಹಿಳೆ ಮಠಕ್ಕೆ ಒಂದೆರಡು ಬಾರಿ ಬಂದದ್ದನ್ನು ಕಂಡೆನು.

೧೯೪೨ರಲ್ಲಿ ಕಾವಿ ಬಟ್ಟೆ ಧರಿಸಿದ ಸಂನ್ಯಾಸಿನಿಯೋರ್ವಳು ನನ್ನನ್ನು ನೋಡಲು ಬೇಲೂರುಮಠಕ್ಕೆ ಬಂದಳು. ಅವಳೊಂದಿಗೆ ಸಣ್ಣ ಪ್ರಾಯದ ಶಿಷ್ಯೆಯೊಬ್ಬಳು ಇದ್ದಳು. ಆ ಸಂನ್ಯಾಸಿನಿಯನ್ನು ನನ್ನಿಂದ ಮೊದಲು ಗುರುತಿಸಲಾಗಲಿಲ್ಲ. ಆದರೆ ಇಪ್ಪತ್ತನಾಲ್ಕು ವರ್ಷಗಳ ಹಿಂದೆ ತಾನು ಬಲರಾಮ ಮಂದಿರದಲ್ಲಿ ಮಹಾರಾಜ್‌ರವರನ್ನು ಭೇಟಿಯಾದದ್ದನ್ನು ಆಕೆ ನೆನಪು ಮಾಡಿದಾಗ ನನಗೆ ಆ ಘಟನೆ ಥಟ್ಟನೆ ನೆನಪಾಗಿ, ಅಷ್ಟೊಂದು ವರ್ಷಗಳ ಕಾಲ ಆಕೆ ಎಲ್ಲಿ ನೆಲೆಸಿದ್ದಳೆಂದು ಕೇಳಿದೆ. ಮಹಾರಾಜ್‌ರ ಸೂಚನೆಯಂತೆ ಆಕೆ ಈ ಅವಧಿಯನ್ನು ಬನಾರಸ್, ಬೃಂದಾವನ ಮತ್ತು ಹರಿದ್ವಾರಗಳಂತಹ ಯಾತ್ರಾಸ್ಥಳಗಳಲ್ಲಿ, ಆಧ್ಯಾತ್ಮಿಕ ಸಾಧನೆಗಳಲ್ಲಿ ಕಳೆದಳೆಂದು ತಿಳಿಸಿದಳು. ಈಗ ಆಕೆ ಕೊಲ್ಕತಾದ ಕಾಳೀಘಾಟ್‌ನಲ್ಲಿ ಕೆಲವು ಶಿಷ್ಯೆಯರೊಡನೆ ಇರುವಳು. ಅವಳ ನಿಲುವು ಖಚಿತವಾದ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದಂತಿತ್ತು.

ಸುಮಾರು ಮೂರು ವರ್ಷಗಳ ನಂತರ ಈಕೆಯ ಜತೆಯಲ್ಲಿ ಶಿಷ್ಯೆಯಾಗಿ ಬಂದಿದ್ದ ಯುವತಿಯು ನನ್ನನ್ನು ನೋಡಲು ಮಠಕ್ಕೆ ಬಂದಳು. ಆಕೆಯ ಗುರುವಿನ ಬಗ್ಗೆ ವಿಚಾರಿಸಿದಾಗ, ಎರಡು ವರ್ಷಗಳ ಹಿಂದೆ ಅವರು ತೀರಿಕೊಂಡರೆಂದು ತಿಳಿದು ಬಂದಿತು. ಆಕೆಯ ಕೊನೆಗಾಲದಲ್ಲಿ ಖಾಯಿಲೆಯಾಗಿತ್ತು. ಒಂದು ದಿನ ಬೆಳಗ್ಗೆ ಮುಂಬರುವ ಪ್ರಶಸ್ತವಾದ ದಿನವನ್ನು ನೋಡಲು ಪಂಚಾಂಗವನ್ನು ಕೇಳಿದರು. ಆ ದಿನವೆಲ್ಲ ಪ್ರಾರ್ಥನೆ ಮತ್ತು ಧ್ಯಾನದಲ್ಲಿ ಕಳೆಯುವಂತೆ ತನ್ನ ಶಿಷ್ಯೆಯರಿಗೆ ಹೇಳಿದರು. ಶ್ರೀರಾಮಕೃಷ್ಣ, ಮಹಾಮಾತೆ ಮತ್ತು ಮಹಾರಾಜರ ಹೆಸರುಗಳನ್ನು ಸ್ವತಃ ಮತ್ತೆ ಮತ್ತೆ ಉಚ್ಚರಿಸಿದರು. ಹಾಗೆ ಮಾಡುತ್ತಾ, ಸಂಪೂರ್ಣ ಪ್ರಜ್ಞೆಯಲ್ಲಿ, ದೇಹವನ್ನು ತೊರೆದರು.

## ಬದುಕಿರುವಾಗಲೇ ಉಪಯುಕ್ತತೆ

ಒಮ್ಮೆ ಒಂದು ಹಂದಿಯು ದಾರಿಯಲ್ಲಿ ಹೋಗುತ್ತಿದ್ದಾಗ ಬಳಿಯಲ್ಲಿ ಹಸುವೊಂದು ನಿಂತಿತ್ತು. ಹಂದಿಯು ಹಸುವನ್ನು ಕೇಳಿತು, "ಅಕ್ಕಾ! ಜನರು ನಿನ್ನನ್ನು ಬಹಳ ಗೌರವಿಸುತ್ತಾರೆ, ಪೂಜಿಸುತ್ತಾರೆ. ನಿನ್ನ ಬಗ್ಗೆ ಸದಾ ಹೊಗಳಿ ಮಾತನಾಡುತ್ತಾರೆ. ಆದರೆ ನಿನಗಿಂತ ನನ್ನಿಂದಲೇ ಅವರಿಗೆ ಹೆಚ್ಚು ಉಪಯೋಗ. ನನ್ನ ಮಾಂಸದಿಂದ ಎಂತೆಂತಹ ತಿನಿಸುಗಳನ್ನು ತಯಾರಿಸುತ್ತಾರೆ, ಕೊಬ್ಬಿನಿಂದಲೂ ಬಗೆಬಗೆಯ ಆಹಾರ ತಯಾರಿಸುತ್ತಾರೆ. ಅಷ್ಟೇ ಏಕೆ ನನ್ನ ಕಾಲುಗಳನ್ನೂ ಕೂಡ ಬಿಡುವುದಿಲ್ಲ! ಆದರೂ ನನ್ನನ್ನು ಯಾರೂ ಪ್ರೀತಿಸುವುದಿಲ್ಲ. ತಿರಸ್ಕಾರದಿಂದಲೇ ಕಾಣುತ್ತಾರೆ. ಹಂದಿ ತೊಲಗು ಎನ್ನುತ್ತಾರೆ. ಏಕೆ?" ಹಸು ಸ್ವಲ್ಪ ಆಲೋಚಿಸಿ ಹೇಳಿತು, "ತಮ್ಮ, ನಾನು ಬದುಕಿರುವಾಗಲೇ ಅವರಿಗೆ ಉಪಯುಕ್ತವಾದ ಪದಾರ್ಥಗಳನ್ನು ನೀಡುತ್ತೇನೆ. ಪ್ರಾಯಶಃ ಅದಕ್ಕೇ ಅವರಿಗೆ ನನ್ನ ಬಗ್ಗೆ ಪ್ರೀತಿ ಹೆಚ್ಚು ಎಂದು ಕಾಣುತ್ತದೆ."

## ತನ್ನ ಬಾಲವನ್ನೇ ಹಿಡಿಯ ಹೊರಟ ನಾಯಿಯ ವ್ಯರ್ಥ ಪ್ರಯತ್ನ

ಒಂದು ನಾಯಿಮರಿ ತನ್ನ ಬಾಲವನ್ನು ಹಿಡಿಯಲು ಪ್ರಯತ್ನಿಸುತ್ತ ಗಿರಗಿರನೆ ಸುತ್ತುತ್ತಿತ್ತು. ಇದನ್ನು ಕಂಡ ಒಂದು ದೊಡ್ಡ ನಾಯಿ ಅದನ್ನು ಕೇಳಿತು, "ಹಾಗೇಕೆ ಮಾಡುತ್ತಿರುವೆ?" ಮರಿ ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ಹೇಳಿತು, "ನೋಡು, ನಾನು ಯಾವ ನಾಯಿಗೂ ತಿಳಿಯದ ಮಹತ್ವವಾದ ತತ್ತ್ವವೊಂದನ್ನು ಬಹಳ ಆಲೋಚಿಸಿ ಕಂಡುಕೊಂಡಿದ್ದೇನೆ. ಇದು ಇಡೀ ಜಗತ್ತಿನ ಸಮಸ್ಯೆಗೇ ಪರಿಹಾರ ನೀಡಬಲ್ಲ ವಿಚಾರ. ನಾವೆಲ್ಲ ಸುಖ ಬಯಸುತ್ತೇವೆ. ಎಲ್ಲ ಸುಖವೂ ನನ್ನ ಬಾಲದಲ್ಲಿಯೇ ಇದೆ ಎಂದು ನನಗೆ ಗೊತ್ತಾಗಿದೆ. ಅದಕ್ಕೇ ಅದನ್ನು ಹಿಡಿಯಲು ಪ್ರಯತ್ನಿಸುತ್ತಿರುವೆ." ದೊಡ್ಡ ನಾಯಿ ನಗುತ್ತ ಹೇಳಿತು, "ನಾನೂ ಕೂಡ ಜೀವನದ ಸಮಸ್ಯೆಗಳನ್ನು ಕುರಿತು ಬಹಳ ಗಂಭೀರವಾಗಿ ಆಲೋಚಿಸಿರುವೆ. ಸುಖವೆಲ್ಲ ಬಾಲದಲ್ಲಿದೆ ಎಂದು ನನಗೂ ತಿಳಿದಿದೆ. ಆದರೆ ನನ್ನ ಬಾಲ ನನ್ನೊಂದಿಗೇ ಇದೆಯೆಂದೂ ನನಗೆ ಗೊತ್ತು. ನಾನು ಸುಮ್ಮನಿದ್ದರೆ ಸಾಕು. ಸುಖ ನನ್ನ ಹಿಂದೆಯೇ ಇರುತ್ತದೆ. ಅದನ್ನು ಹಿಡಿಯುವ ಹುಚ್ಚು ನನಗಿಲ್ಲ!"